**ದಿನಾಂಕಃ 25.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ವಿ.ಬಿ.ಎಸ್ ವಕೀಲರಿಂದಃ-**

32. ಹುಣಸ್ನಾಳು ಗ್ರಾಮ ನಮ್ಮ ಪೊಲೀಸ್ ಠಾಣೆಯಿಂದ 8 ರಿಂದ 10 ಕಿ.ಮೀ ದೂರ ಇದೆ. ಹುಣಸ್ನಾಳು ಗ್ರಾಮದಿಂದ ನಂಜನಗೂಡಿಗೆ ಬಸ್ ಸೌಕರ್ಯ ಇದೆ ಎಂದರೆ ನಿಜ. ಆದರೆ ಬಹಳ ಕಡಿಮೆ ಬಸ್ಸುಗಳು ಇವೆ. ಯಾವ-ಯಾವ ಸಮಯಕ್ಕೆ ಬಸ್ ಸೌಕರ್ಯ ಇದೆ ಎಂದು ನನಗೆ ಗೊತ್ತಿಲ್ಲ.

33. ನಮ್ಮ ಠಾಣೆಯಿಂದ ನಂಜನಗೂಡು ನ್ಯಾಯಾಧೀಶರ ಗೃಹಕಚೇರಿ ಒಂದು ಕಿ.ಮೀ ದೂರ ಇದೆ. ನಮ್ಮ ಠಾಣೆಯಿಂದ ನಂಜನಗೂಡು ನ್ಯಾಯಾಧೀಶರ ಗೃಹಕಚೇರಿಗೆ ನಡೆದುಕೊಂಡು ಹೋದರೆ 5 ರಿಂದ 10 ನಿಮಿಷ ಆಗುತ್ತದೆ ಎಂದರೆ ನಿಜ. ದಿಃ-01.06.2023 ರಂದು ರಾತ್ರಿ 8.40 ಕ್ಕೆ ಎಫ್.ಐ.ಆರ್ ನ್ನು ನ್ಯಾಯಾದೀಶರ ಗೃಹಕಚೇರಿಗೆ ಕಳುಹಿಸಿದ್ದೆ. ಅದು ನ್ಯಾಯಾದೀಶರ ಗೃಹಕಚೇರಿಗೆ ಅಂದಾಜು ಅರ್ಧ ಗಂಟೆಯಲ್ಲಿ ತಲುಪಿರಬಹುದು. ಆ ದಿನ ನಾವು ಠಾಣೆಯಿಂದ ಎಷ್ಟು ಗಂಟೆಗೆ ಹೊರಟಿದ್ದೆವು ಮತ್ತು ಎಷ್ಟು ಗಂಟೆಗೆ ವಾಪಸ್ಸು ಬಂದೆವು ಎಂದು ಠಾಣಾ ದಿನಚರಿಯಲ್ಲಿ ನಮೂದಿದೆ. ಠಾಣಾ ಡೈರಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

34. ಆ ದಿನ 2 ನೇ ಆರೋಪಿ ಬಸಮ್ಮ ಇವರನ್ನು ಅವರ ಮನೆಯ ಮುಂಭಾಗದಲ್ಲಿ ವಶಕ್ಕೆ ಪಡೆದಿದ್ದೆ. ಅವರನ್ನು ವಶಕ್ಕೆ ಪಡೆದ ಸ್ಥಳದಲ್ಲಿ ಅವರ ಅಂಗಶೋದನೆ ಮಾಡಿರಲಿಲ್ಲ. ರಾತ್ರಿ 9.15 ಕ್ಕೆ 2 ನೇ ಆರೋಪಿಯನ್ನು ವಶಕ್ಕೆ ಪಡೆದಿಲ್ಲವಾದ ಕಾರಣ ಅವರ ಅಂಗಶೋದನೆ ಮಾಡಿಲ್ಲ ಎಂದರೆ ಸರಿಯಲ್ಲ.

35. ರಾತ್ರಿ 9.15 ಕ್ಕೆ ನಾನು ಮನೆಯ ಒಳಗಡೆ ಪ್ರವೇಶಿಸಿ, ಶವವನ್ನು ನೋಡಿ ಶವದ ಬೆಂಗಾವಲಿಗೆ ಸಿಬ್ಬಂದಿಯನ್ನು ನೇಮಿಸಿದ್ದೆ. ಆ ದಿನ ಠಾಣೆಗೆ ವಾಪಸ್ಸು ಬಂದ ಬಳಿಕ 2 ನೇ ಆರೋಪಿ ಬಸಮ್ಮ ಇವರ ಮೈಮೇಲೆ ಇದ್ದ ಬಟ್ಟೆಗಳ ಬಗ್ಗೆ ಪಿಎಸ್‌ಆರ್ ನಲ್ಲಿ ನಮೂದಿಸಿದ್ದೇನೆ. ಪಿಎಸ್‌ಆರ್ ನ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಆ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

36. 2 ನೇ ಆರೋಪಿ ರಿಪೀಸ್ ಪಟ್ಟಿ ಮತ್ತು ಗುಂಡುಕಲ್ಲು ಮತ್ತು ಮಚ್ಚಿನಿಂದ ಹೊಡೆದು ಕೊಲೆ ಮಾಡುವುದಾಗಿ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾ.ಸಾಃ1 ಮತ್ತು 2 ನೇ ಆರೋಪಿ ಘಟನಾ ಸ್ಥಳವನ್ನು ತೋರಿಸಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕಾಲಕ್ಕೆ 2 ನೇ ಆರೋಪಿಯನ್ನು ನಾವು ವಶಕ್ಕೆ ಪಡೆದಿರಲಿಲ್ಲ ಎಂದರೆ ಸರಿಯಲ್ಲ.

37. ಬ್ಯಾಟರಿ ಲೈಟ್ ಮತ್ತು ಮನೆ ಬೆಳಕಿನ ಸಹಾಯದಿಂದ ಮಹಜರ್ ಮಾಡಿದ್ದೆ. ನಿಶಾನೆ ಪಿ-2 ಮಹಜರಿನಲ್ಲಿ ಬರೆದ ವಿಷಯ ಸರಿ ಇದೆ. ನಿಶಾನೆ ಪಿ-2 ಮಹಜರಿನ ಪುಟ -2 ರ ಪ್ಯಾರ 2 ಮತ್ತು 3 ರಲ್ಲಿ ಬಸಮ್ಮ ಆ ಸ್ಥಳದಲ್ಲಿ ಇದ್ದ ಬಗ್ಗೆ ನಮೂದು ಇಲ್ಲ ಎಂದರೆ ನಿಜ. ಪ್ಯಾರ-4 ರಲ್ಲಿ ಬಸಮ್ಮ ಇವರನ್ನು ಸ್ಥಳದಲ್ಲೇ ಹಾಜರಿದ್ದ ಆರೋಪಿ ಎಂದು ಸಂಬೋದಿಸಿ ಬರೆಯಲಾಗಿದೆ ಎಂದರೆ ನಿಜ. ನಾನು ಪಂಚರೊಂದಿಗೆ ಆ ಮನೆಯ ಒಳಗೆ ಹೋದ ಬಳಿಕ 2 ನೇ ಆರೋಪಿ ಬಸಮ್ಮ ಒಳಗಡೆ ಬಂದು ಗಂಡನ ತಲೆಯನ್ನು ತೊಡೆಯ ಮೇಲೆ ಇಟ್ಟುಕೊಂಡು ದುಃಖಿಸುತ್ತಿದ್ದರು ಎಂದರೆ ಸರಿಯಲ್ಲ. ನಂತರ ಅವರನ್ನು ಠಾಣೆಗೆ ಕರೆದುಕೊಂಡು ಬಂದೆವು ಎಂದರೆ ಸರಿಯಲ್ಲ.

38. ಸಾಮಾನ್ಯವಾಗಿ ಪ್ರಥಮ ವರ್ತಮಾನ ವರದಿಯನ್ನು ಮತ್ತು ಮಾಲುಪಟ್ಟಿಯನ್ನು ಅದೇ ದಿನ ನ್ಯಾಯಾಲಯಕ್ಕೆ ಕಳುಹಿಸಲು ಆಗದೇ ಇದ್ದರೆ ಮರುದಿನ ನ್ಯಾಯಾಲಯದ ಕರ್ತವ್ಯಕ್ಕೆ ಹೋಗುವ ಸಿಬ್ಬಂದಿಗಳ ಜೊತೆ ಕಳುಹಿಸುತ್ತೇವೆ ಎಂದರೆ ನಿಜ.

39. ದಿಃ-01.06.2023 ರಂದು ಮಾಡಿದ್ದ ಮಹಜರ್ ಮತ್ತು ಅದಕ್ಕೆ ಸಂಬಂಧಪಟ್ಟ ಮಾಲುಪಟ್ಟಿ ಸಂಖ್ಯೆಃ-105/2023 ನ್ನು ಮರುದಿನ ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ. ನಿಶಾನೆ ಪಿ-2 ಮಹಜರನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಮಾಲುಪಟ್ಟಿಯನ್ನು ಸ್ಥಳದಲ್ಲಿ ತಯಾರಿಸದೇ ನಂತರದಲ್ಲಿ ಠಾಣೆಯಲ್ಲಿ ತಯಾರಿಸಿ ದಿಃ-08.06.2023 ರಂದು ನ್ಯಾಯಾಲಯಕ್ಕೆ ಕಳುಹಿಸಿದ್ದೇವೆ ಎಂದರೆ ಸರಿಯಲ್ಲ. ಪ್ರಥಮ ವರ್ತಮಾನ ವರದಿ ಆಗಿದ್ದ ನಂತರದ ದಾಖಲೆಗಳನ್ನು ದಿಃ-08.06.2023 ಕ್ಕೆ ಮುಂಚೆ ನ್ಯಾಯಾಲಯಕ್ಕೆ ಕಳುಹಿಸಿಲ್ಲ ಎಂದರೆ ಸರಿಯಲ್ಲ.

40. 2 ನೇ ಆರೋಪಿ ಬಸಮ್ಮ ಯಾವುದೇ ಆಯುಧಗಳನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ದಿಃ- 01.06.2023 ರಂದು ಸಂಜೆ 5 ಗಂಟೆಗೆ ನಾನು ಘಟನೆ ಸ್ಥಳಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿದ್ದರಿಂದ ನನಗೆ ಮೊದಲೇ ಘಟನೆ ಸ್ಥಳದ ಬಗ್ಗೆ ಮೊದಲೇ ಗೊತ್ತಿತ್ತು ಎಂದರೆ ಸರಿಯಲ್ಲ. ಎಂ.ಒಃ-1 ರಿಂದ 11 ನ್ನು ಘಟನಾ ಸ್ಥಳದಲ್ಲಿಯೇ ಅಮಾನತ್ತುಪಡಿಸಿಕೊಂಡು ಸೀಲ್ ಮಾಡಿಕೊಂಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವಸ್ತುಗಳನ್ನು ನಂತರದಲ್ಲಿ ನನಗೆ ಅನುಕೂಲವಾಗುವಂತೆ ತಯಾರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

41. ಬಸಮ್ಮ ಇವರನ್ನು ದಸ್ತಗಿರಿ ಮಾಡಿದ ಬಗ್ಗೆ ಶಿವಣ್ಣ ಇವರಿಗೆ ಮೌಖಿಕವಾಗಿ ತಿಳಿಸಿದ್ದೆ ಆದರೆ ಅವರಿಗೆ ತಿಳಿಸಿದ ಬಗ್ಗೆ ಅವರ ಸಹಿಯನ್ನು ಪಡೆದಿಲ್ಲ. ಸಾಕ್ಷಿ ಪುನಃ ಹೇಳುತ್ತಾರೆ ಆ ಬಗ್ಗೆ ಅವರ ಸಹಿ

ಪಡೆದಿದ್ದೇನೆ. ಶಿವಣ್ಣ ಇವರು 2 ನೇ ಆರೋಪಿ ಅಳಿಯ ನಿರುತ್ತಾನೆ. ಆದರೆ ಯಾವ ರೀತಿ ಅಳಿಯ ಎಂದು ನಿಖರವಾಗಿ ಗೊತ್ತಿಲ್ಲ. ಆ ದಿನ ಬಸಮ್ಮ ಇವರು ಧರಿಸಿದ್ದ ಬಟ್ಟೆಗಳನ್ನು ಜಪ್ತಿ ಮಾಡುವ ಕಾಲಕ್ಕೆ ಅವರಿಗೆ ತರಿಸಿಕೊಟ್ಟಿದ್ದ ಬೇರೆ ಬಟ್ಟೆಗಳ ಬಣ್ಣ ಯಾವುದು ಎಂದು ಈಗ ನೆನಪಿಲ್ಲ. ದಿಃ-02.06.2023 ರ ಬೆಳಗಿನ ಜಾವ ಮಾಡಿದ್ದ ನಿಪಿ-10 ಮಹಜರ್ ಕಾಲಕ್ಕೆ ಅಮಾನತ್ತುಪಡಿಸಿಕೊಂಡ ಬಟ್ಟೆಗಳ ಮಾಲುಪಟ್ಟಿ ಸಂಖ್ಯೆ-106/2023 ನ್ನು ಅದೇ ದಿನ ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ. ಅವುಗಳನ್ನು ಯಾವ ದಿನಾಂಕದಂದು ನ್ಯಾಯಾಲಯಕ್ಕೆ ತಲುಪಿಸಲಾಗಿದೆ ಎಂದು ನಾನು ಪರಿಶೀಲನೆ ಮಾಡಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ, ಸಾಮಾನ್ಯವಾಗಿ ಆಯಾ ದಿನವೇ ನ್ಯಾಯಾಲಯಕ್ಕೆ ತಲುಪಿಸುತ್ತಾರೆ. ಮಾಲುಪಟ್ಟಿ ಸಂಖ್ಯೆ-106/2023 ನ್ನು ನಂತರದಲ್ಲಿ ತಯಾರಿಸಿ ದಿಃ- 08.06.2023 ರಂದು ನ್ಯಾಯಾಲಯಕ್ಕೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

42. ದಿಃ-02.06.2023 ರಂದು 2 ನೇ ಆರೋಪಿ ಬಸಮ್ಮ ಇವರನ್ನು ಆಸ್ಪತ್ರೆಯಲ್ಲಿ ವಿಶ್ರಾಂತಿಯಲ್ಲಿರಿಸಿದ ಬಗ್ಗೆ ದಾಖಲೆ ಇಲ್ಲ. ದಿಃ- 02.06.2023 ರ ಬೆಳಿಗ್ಗೆ 9 ಗಂಟೆ ವರೆಗೆ 2 ನೇ ಆರೋಪಿ ಆಸ್ಪತ್ರೆಯಲ್ಲಿದ್ದರು. ದಾಖಲೆಗಳಲ್ಲಿ ಅವರು ಬೆಳಿಗ್ಗೆ 9 ಗಂಟೆವರೆಗೆ ಆಸ್ಪತ್ರೆಯಲ್ಲಿದ್ದ ಬಗ್ಗೆ ದಾಖಲೆಗಳಿಲ್ಲ. ಮಹಿಳೆಯನ್ನು ಬಂಧನದಲ್ಲಿಟ್ಟಾಗ ಆ ಬಗ್ಗೆ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಕಳುಹಿಸಬೇಕು ಎಂದರೆ ನಿಜ.

43. ದಿಃ-02.06.2023 ರಂದು ಮಾಡಿದ್ದ ಶವ ಪಂಚನಾಮೆ ಮರುದಿನ ನ್ಯಾಯಾಲಯಕ್ಕೆ ಕಳುಹಿಸಿದ್ದೆ. ನಿಪಿ-11 ಮಹಜರನ್ನು ಸಹ ನಂತರದಲ್ಲಿ ಸೃಷ್ಟಿ ಮಾಡಿ ದಿಃ- 08.06.2023 ರಂದು ನ್ಯಾಯಾಲಯಕ್ಕೆ ತಲುಪಿಸಿದ್ದೇವೆ ಎಂದರೆ ಸರಿಯಲ್ಲ. ಚಾ.ಸಾಃ5 ರಿಂದ 9 ರವರ

ಸಮಕ್ಷಮ ಶವ ಮಹಜರ್ ಮಾಡಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶವ ಮಹಜರ್ ಕಾಲಕ್ಕೆ ಯಾವುದೇ ಸಾಕ್ಷಿಗಳ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆ ಹೇಳಿಕೆಗಳನ್ನು ನಂತರದಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

44. ಶವ ಪಂಚನಾಮೆ ಕಾಲಕ್ಕೆ ಸಿಬ್ಬಂದಿಗಳ ಮೊಬೈಲ್ ನಲ್ಲಿ ಪೋಟೋ ತೆಗೆಸಿದ್ದೇನೆ. ದಿಃ- 02.06.2023 ರಂದು ಸಿಬ್ಬಂದಿಗಳ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

45. ನಮ್ಮ ಠಾಣೆಯಿಂದ ನಂಜನಗೂಡು ನಗರದ ಚಾಮ್ಲಾ ಪುರ 3 ಕಿ.ಮೀ ದೂರ ಇದೆ. ದಿಃ- 03.06.2023 ರಂದು ಚಾ.ಸಾಃ2 ಮತ್ತು 10 ರವರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಚಾ.ಸಾಃ2 ಶ್ರೀಕಂಠ ರವರು ಶವ ದೊರೆತಿದ್ದ ಮನೆಯಲ್ಲಿ ಹೆಂಡತಿ ಮಕ್ಕಳೊಂದಿಗೆ ವಾಸವಿದ್ದ ಎಂದರೆ ಗೊತ್ತಿಲ್ಲ. ಶವ ದೊರೆತ ಮನೆಯಲ್ಲಿ 2 ನೇ ಆರೋಪಿ ಬಸಮ್ಮರವರು ವಾಸವಿದ್ದ ಬಗ್ಗೆ ತನಿಖೆ ವೇಳೆ ಗೊತ್ತಾಗಿದೆ. ಆದರೆ ಆ ಬಗ್ಗೆ ದಾಖಲೆಯನ್ನು ಪಡೆದಿಲ್ಲ.

46. ಚಾ.ಸಾಃ2 ಶ್ರೀಕಂಠರವರು ಆ ಮನೆಯಲ್ಲಿ ವಾಸವಿದ್ದ ಮತ್ತು ಹೊರಗಡೆ ಹೋಗಬೇಕಾದರೆ ಬೀಗ ಹಾಕಿಕೊಂಡು ಹೋಗುತ್ತಿದ್ದ ಎಂದರೆ ಗೊತ್ತಿಲ್ಲ. ನಾವು ಹೋದಾಗ ಆ ಮನೆಯ ಬೀಗ ಒಡೆದು ನೇತಾಡುತ್ತಿದ್ದುದನ್ನು ನಾನು ಗಮನಿಸಿಲ್ಲ.ನಾನು ತನಿಖೆಯಲ್ಲಿ ನಿರತನಾಗಿರುವುದರಿಂದ ಚಾ.ಸಾಃ2 ಇವರ ಹೇಳಿಕೆಯನ್ನು ದಿಃ- 03.06.2023 ರಂದು ಪಡೆದಿದ್ದೇನೆ. ಡೈರಿಯಲ್ಲಿ ಆ ರೀತಿ ಕೆಲಸದಲ್ಲಿ ನಿರತನಾದ ಬಗ್ಗೆ ಬರೆದಿಲ್ಲ. ದಿಃ-01.06.2023 ರವರು ಚಾ.ಸಾಃ2 ಶ್ರೀಕಂಠ ಚಾಮ್ಲಾಪುರದ ತನ್ನ ಅತ್ತೆಮಾವನ ಮನೆಯಲ್ಲಿ ಇದ್ದ ಎಂದರೆ ಗೊತ್ತಿಲ್ಲ. ಚಾ.ಸಾಃ2 ನಡೆದುಕೊಂಡ ರೀತಿಯನ್ನು ನೋಡಿದರೆ ಚಿಕ್ಕರಾಜಶೆಟ್ಟಿಯ ಸಾವಿನ ಬಗ್ಗೆ ಚಾಸಾಃ2 ರವರ ಮೇಲೆ ಅನುಮಾನ ಬರುತ್ತದೆ ಎಂದರೆ ಸರಿಯಲ್ಲ.

47. ಚಾ.ಸಾಃ2 ರವರ ಹೇಳಿಕೆಯಲ್ಲಿ ದಿಃ– 02.06.2023 ರ ರಾತ್ರಿ ಚಾ.ಸಾಃ2 ತನ್ನ ಹೆಂಡತಿ ಮನೆಗೆ ಹೋದ ಬಗ್ಗೆ ನಮೂದು ಇದೆ ಎಂದರೆ ಇರಬಹುದು. ದಿಃ– 02.06.2023 ರ ರಾತಿ ಚಾ.ಸಾಃ2 ತನ್ನ ಹೆಂಡತಿ ಮನೆಗೆ ಹೋದ ಬಳಿಕ ತನ್ನ ತಂದೆ ಸಾವಿನ ಬಗ್ಗೆ ಏನೆಂದು ಹೇಳಿದ್ದ ಎಂದು ನನಗೆ ಗೊತ್ತಿಲ್ಲ. ಚಾ.ಸಾಃ2 ಮತ್ತು ಅವರ ಕುಟುಂಬದವರನ್ನು ರಕ್ಷಣೆ ಮಾಡುವ ಸಲುವಾಗಿ 2 ನೇ ಆರೋಪಿ ಬಸಮ್ಮ ಆ ಮನೆಯಲ್ಲಿ ವಾಸವಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

48. RFSL ಗೆ ಮಾಲುಪಟ್ಟಿ ಸಂಖ್ಯೆ– 105, 106 ಮತ್ತು 111 ರಲ್ಲಿನ ವಸ್ತುಗಳನ್ನು ಕಳುಹಿಸಿದಾಗ ಪ್ರಕರಣದ ವಿವರಗಳನ್ನು ಸಹ ಕಳುಹಿಸಿದ್ದೆ ಎಂದರೆ ನಿಜ. 1 ನೇ ಆರೋಪಿ ಶಿವನಾಗನನ್ನು ವಶಕ್ಕೆ ಪಡೆದ ಬಳಿಕ ಕೊಲೆಯ ಬಗ್ಗೆ ಒಪ್ಪಿಕೊಂಡಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

49. ಚಾ.ಸಾಃ11 ಮತ್ತು 12 ರವರ ಹೇಳಿಕೆಗಳನ್ನು ತಡವಾಗಿ ಪಡೆದ ಬಗ್ಗೆ ಕಾರಣವನ್ನು ಅವರ ಹೇಳಿಕೆಯಲ್ಲಿ ನಮೂದಿಲ್ಲ ಎಂದರೆ ಇರಬಹುದು. ತನಿಖೆಯಲ್ಲಿ ನಿರತನಾಗಿರುವುದರಿಂದ ಅವರ ಹೇಳಿಕೆಯನ್ನು ತಡವಾಗಿ ಪಡೆದಿರಬಹುದು. ಆ ರೀತಿ ತನಿಖೆಯಲ್ಲಿ ನಿರತನಾಗಿರುವುದರಿಂದ ಹೇಳಿಕೆ ಪಡೆಯಲು ತಡವಾದ ಬಗ್ಗೆ ಆ ಹೇಳಿಕೆಯಲ್ಲಿ ನಮೂದಿಲ್ಲ. ಚಾ.ಸಾಃ11 ಮತ್ತು 12 ರವರು ನಿಶಾನೆ ಪಿ–13 ಮತ್ತು 14 ರಂತೆ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

50. ನಿಶಾನೆ ಪಿ–21 ಮತ್ತು 22 ನ್ನು ಪ್ರಿಂಟ್ ತೆಗೆದ ಬಗ್ಗೆ ಕಲಂ 65(ಬಿ) ಪ್ರಮಾಣ ಪತ್ರ ಹಾಜರುಪಡಿಸಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಅದರ ಅವಶ್ಯಕತೆ ಇಲ್ಲ. ಚಾಸಾಃ13 ರಿಂದ 16 ನಿಶಾನೆ ಪಿ–16 ರಿಂದ 19 ರಂತೆ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

51. ಚಾ.ಸಾಃ11 ಮತ್ತು 12ರವರ ನಿಶಾನೆ ಪಿ–12 ಮತ್ತು 15 ಎಂದು ಗುರುತಿಸಿರುವ ಹೇಳಿಕೆಗಳನ್ನು ಪರಿಶೀಲನೆ ಮಾಡಿದ್ದೇನೆ. ವೈದ್ಯರ ಮೇಲೆ ಒತ್ತಡ ಹಾಕಿ ನಿಶಾನೆ ಪಿ–25 ರಂತೆ ಅವರ ಅಭಿಪ್ರಾಯ ವರದಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ–24 ರಿಂದ 26 ರ ವರದಿಯನ್ನು ನನ್ನ ಒತ್ತಡದ ಮೇರೆಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಮೃತ ಚಿಕ್ಕರಾಜಶೆಟ್ಟಿಯ ಸಾವಿಗೂ ಈ ಪ್ರಕರಣದ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದು ತನಿಖೆ ವೇಳೆ ಕಂಡು ಬಂದರೂ ಸಹ, ಆರೋಪಿತರ ವಿರುದ್ಧ ಆರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

52. ಚಾ.ಸಾಃ2 ನನ್ನ ತಂದೆಗೆ 7 ಎಕರೆ ಸ್ವಯಾರ್ಜಿತ ಜಮೀನು ಇತ್ತು ಎಂದು ಹೇಳಿಲ್ಲ, 9 ಎಕರೆ ಎಂದು ಹೇಳಿದ್ದಾನೆ. 2ನೇ ಆರೋಪಿ ಬಸಮ್ಮಳ ಹೆಸರಿಗೆ 6 ಎಕರೆ ಜಮೀನನ್ನು ನನ್ನ ತಂದೆ ಖರೀದಿ ಮಾಡಿಕೊಟ್ಟಿದ್ದು ಎಂದು ಚಾ.ಸಾಃ2 ಹೇಳಿಕೆ ಕೊಟ್ಟಿಲ್ಲ. ನನ್ನ ತಂದೆ ರಾಜು ಮತ್ತು ಶಿವನಾಗುವಿನ ವಿರುದ್ಧ ಸಿವಿಲ್ ದಾವೆ ಹೂಡಿದ್ದರು ಎಂದು ಹೇಳಿಲ್ಲ ಎಂದು ಚಾ.ಸಾಃ2 ಹೇಳಿಕೆ ಕೊಟ್ಟಿಲ್ಲ, ಆದರೆ ನಮಗೂ ಹಿರಿಯ ಹೆಂಡತಿ ಮಕ್ಕಳಿಗೂ ಸಿವಿಲ್ ದಾವೆ ಇತ್ತು ಎಂದು ಹೇಳಿದ್ದಾರೆ. 2021–22ನೇ ಸಾಲಿನಲ್ಲಿ ನನ್ನ ತಂದೆ 3 ಎಕರೆ ಜಮೀನನ್ನು ಮಕ್ಕಳು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿಲ್ಲ ಎಂದು ಮಾರಾಟ ಮಾಡಿದ್ದರು ಎಂದು ಚಾ.ಸಾಃ2 ಹೇಳಿಕೆ ಕೊಟ್ಟಿಲ್ಲ, ಸಾಕ್ಷಿ ಸ್ವತಃ ಹೇಳುತ್ತಾರೆ 5 ಎಕರೆ ಮಾರಾಟ ಮಾಡಿದ್ದಾಗಿ ಹೇಳಿದ್ದರು.

53. ಚಾಸಾಃ2 ರವರು ತಮ್ಮ ಪಾಟೀಸವಾಲಿನ ಪ್ಯಾರ 22 ರಲ್ಲಿ ಹೇಳಿರುವಂತೆ ''ದಿಃ- 01.06.2023 ರಂದು ....................... ಭಯಗೊಂಡು ನಾನು ಹೆಂಡತಿ ಮನೆಗೆ ಹೋದೆ'' ಎಂದು ಹೇಳಿಕೆ ಕೊಟ್ಟಿಲ್ಲ. ದಿಃ- 02.06.2023 ರಂದು ಚಾಸಾಃ2 ರವರು ಹೇಳಿಕೆ ಕೊಟ್ಟಿಲ್ಲ. ದಿಃ- 03.06.2023 ರಂದು ಹೇಳಿಕೆ ಕೊಟ್ಟಿದ್ದಾರೆ.

54. ಚಾ.ಸಾಃ5 ರವರು ನಿಶಾನೆ ಡಿ-1 ರಂತೆ ಹೇಳಿಕೆ ಕೊಟ್ಟಿದ್ದಾರೆ. ಚಾ.ಸಾಃ5 ರವರು ಪಾಟೀ ಸವಾಲಿನ ಪ್ಯಾರ 4 ರಲ್ಲಿ ಹೇಳಿರುವಂತೆ ''ಸುಮಾರು 15-20 ವರ್ಷಗಳ ಕಾಲ ................ ವಾಸ ಮಾಡಲು ಪ್ರಾರಂಬಿಸಿದರು'' ಎಂದು ಹೇಳಿಕೆ ಕೊಟ್ಟಿಲ್ಲ. ಚಾ.ಸಾಃ5 ರವರು ಅವರ ಪಾಟೀ ಸವಾಲಿನ ಪ್ಯಾರ 5 ರಲ್ಲಿ ನಮೂದಿರುವಂತೆ ''ಅದೇ ದಿನ ಸಂಜೆ 6.30 ರ ಸಮಯಕ್ಕೆ ................... ಹುಲ್ಲೇಪುರಕ್ಕೆ ಹೋದೆವು'' ಎಂದು ಹೇಳಿಕೆ ಕೊಟ್ಟಿಲ್ಲ.

55. ದಿಃ-02.06.2023 ರಂದು ಚಾ.ಸಾಃ8 ಜಯಮ್ಮ ಅವರೇ ಆಸ್ಪತ್ರೆಗೆ ಬಂದಿದ್ದರು. ಚಾ.ಸಾಃ8 ರವರು ''ಬಸಮ್ಮ ಮತ್ತು ಅವರ ಮಕ್ಕಳು ನನ್ನ ಗಂಡನೊಂದಿಗೆ ಯಾವಾಗಲು ಜಗಳವಾಡುತ್ತಿದ್ದರು'' ಎಂದು ಹೇಳಿಕೆ ಕೊಟ್ಟಿಲ್ಲ. ಅವರು ''ಹುಣಸನಾಳಿಗೆ ಬಂದ 3 ವರ್ಷಗಳ ನಂತರ ................. ವಾಸ ಮಾಡಲು ಪ್ರಾರಂಭಿಸಿದರು'' ಎಂದು ಹೇಳಿಕೆ ಕೊಟ್ಟಿಲ್ಲ. ಅವರು ''ಬಸಮ್ಮ ನನ್ನ ಗಂಡನೊಂದಿಗೆ ................ ನಮ್ಮಿಬ್ಬರಿಗೂ ಹೊಡೆಯುತ್ತಿದ್ದರು'' ಎಂದು ಹೇಳಿಕೆ ಕೊಟ್ಟಿಲ್ಲ. ಆದರೆ ಜಗಳ ಮಾಡುತ್ತಿದ್ದರು ಎಂದು ಹೇಳಿಕೆ ಕೊಟ್ಟಿದ್ದಾರೆ. ಅವರು ''ಒಮ್ಮೆ ನನಗೂ ನನ್ನ ಗಂಡನಿಗೂ ................... ಆಸ್ಪತ್ರೆಯಲ್ಲಿ ದಾಖಲಾಗಿದ್ದರು'' ಎಂದು ಅವರು ಪಾಟೀ ಸವಾಲಿನ ಪ್ಯಾರ 8 ರಲ್ಲಿ ನಮೂದಿರುವಂತೆ ಹೇಳಿಕೆ ಕೊಟ್ಟಿಲ್ಲ.

56. ಚಾ.ಸಾಃ8 ರವರು ''12 ಗಂಟೆಗೆ ನಾನು ನನ್ನ ಗಂಡನಿಗೆ ..................... ಫೋನ್ ತೆಗೆಯಲಿಲ್ಲ'', ''2.30 ಕ್ಕೆ ಶ್ರೀಕಂಠನಿಗೆ ಫೋನ್ ಮಾಡಿ .................... ನನಗೆ ಫೋನ್ ಮಾಡಲಿಲ್ಲ'', ''ಸಂಜೆ 5 ಗಂಟೆಗೆ ಶ್ರೀಕಂಠ ....................... ಎಂದು ತಿಳಿಸಿದ'' ಎಂದು ಅವರ ಪಾಟೀಸವಾಲಿನ ಪ್ಯಾರ 9 ರಲ್ಲಿ ನಮೂದಿರುವಂತೆ ಹೇಳಿಕೆ ಕೊಟ್ಟಿಲ್ಲ.

57. ಆರೋಪಿತರಾದ ಬಸಮ್ಮ ಮತ್ತು ಶಿವನಾಗ ಮೃತ ಚಿಕ್ಕರಾಜಶೆಟ್ಟಿಯ ಸಾವಿನ ಬಗ್ಗೆ ಯಾವುದೇ ಮಾಹಿತಿ ನೀಡದೇ ಇದ್ದರೂ ನೀಡಿದ್ದಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಎಲ್ಲಾ ದಾಖಲೆಗಳನ್ನು ನಂತರದಲ್ಲಿ ಸೃಷ್ಟಿ ಮಾಡಿ ಕಡತಕ್ಕೆ ಅಳವಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಜವಾದ ಆರೋಪಿಗಳನ್ನು ರಕ್ಷಿಸಿ, ನಿರಪರಾದಿಗಳನ್ನು ಅರೋಪಿಗಳನ್ನಾಗಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮೈಸೂರು.